# ಈ ಕ್ಷಣಕ್ಕಾಗಿ ಬದುಕುವೆ

**ಕಿರುತೆರೆ ನಟಿಯಾಗಿ ಪ್ರಸಿದ್ಧಿ ಗಳಿಸಿರುವ ವೈಷ್ಣವಿ ಗೌಡ ಈಗ ಹಿರಿತೆರೆಗೂ ಅಡಿಯಿಡುತ್ತಿದ್ದಾರೆ. ಅವರು ನಾಯಕಿಯಾಗಿ ನಟಿಸಿರುವ 'ಬಹುಕೃತ ವೇಷಂ' ಬಿಡುಗಡೆಗೆ ಸಜ್ಜಾಗಿದೆ.**

**■ ಪದ್ಮನಾಭ ಭಟ್**



'ದೇವಿ' ಧಾರಾವಾಹಿಯಲ್ಲಿ ಭಕ್ತೆಯಾಗಿ, 'ಅಗ್ನಿಸಾಕ್ಷಿ'ಯಲ್ಲಿ ಖಳಛಾಯೆಯ ಹೆಣ್ಣಾಗಿ, ಬಿಗ್‌ಬಾಸ್‌ನಲ್ಲಿ ಮಿತಭಾಷೆಯ ಆಪ್ತ ಹುಡುಗಿಯಾಗಿ ಜನರ ಮನಸಲ್ಲಿ ಸಹಿ ಹಾಕಿದ್ದ ವೈಷ್ಣವಿ ಗೌಡ ಈಗ ಬೆಳ್ಳಿ ತೆರೆಯಲ್ಲಿ ಮಿನುಗಲು ಸಜ್ಜಾಗಿದ್ದಾರೆ. ಅಂದಹಾಗೆ ಈ ಮೊದಲೂ ಅವರು 'ಗಿರಗಿಟ್ಲೆ' ಎಂಬ ಸಿನಿಮಾದಲ್ಲಿ ಸಣ್ಣ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದರು. ಆದರೆ ಪೂರ್ಣಪ್ರಮಾಣದ ನಾಯಕಿಯಾಗಿ ನಟಿಸುತ್ತಿರುವ ಮೊದಲ ಸಿನಿಮಾ ಇದು.

'ಬಹುಕೃತ ವೇಷಂ' ವೈಷ್ಣವಿ ನಾಯಕಿಯಾಗಿ ನಟಿಸುತ್ತಿರುವ ಮೊದಲ ಸಿನಿಮಾ. ಪ್ರಶಾಂತ್ ಕೆ. ಎಳ್ಳಂಪಳ್ಳಿ ನಿರ್ದೇಶಿಸುತ್ತಿರುವ ಈ ಸಿನಿಮಾದಲ್ಲಿ ವೈಷ್ಣವಿ ಜೊತೆಗೆ ಶಶಿಕಾಂತ್ ಎಂಬವರು ನಟಿಸುತ್ತಿದ್ದಾರೆ. ಈಗಾಗಲೇ ಚಿತ್ರ ಪೂರ್ಣಗೊಂಡಿದ್ದು, ಫೆಬ್ರುವರಿಯಲ್ಲಿಯೇ ತೆರೆಗೆ ತರುವ ಸಿದ್ಧತೆಯಲ್ಲಿ ಚಿತ್ರತಂಡ ತೊಡಗಿದೆ. ವೈಷ್ಣವಿ ಕೂಡ ತಾವು ನಾಯಕಿಯಾಗಿ ನಟಿಸಿದ ಮೊದಲ ಸಿನಿಮಾವನ್ನು ಜನರು ಹೇಗೆ ಸ್ವೀಕರಿಸುತ್ತಾರೆ ಎಂಬ ಕಾತರದಲ್ಲಿ ಕಾಯುತ್ತಿದ್ದಾರೆ.

'ನಾನು ಯಾವತ್ತೂ ನಾಳೆಯ ಬಗ್ಗೆ ಯೋಚಿಸಿದವಳೇ ಅಲ್ಲ. ಈ ದಿನದಲ್ಲಿ, ಈ ಕ್ಷಣದಲ್ಲಿ ಬದುಕುವವಳು. ಮೊದಲು 'ದೇವಿ' ಧಾರಾವಾಹಿಯಲ್ಲಿ ನಟಿಸುವ ಅವಕಾಶ ಬಂದಾಗ ಒಪ್ಪಿಕೊಳ್ಳಬೇಕೋ ಬೇಡವೋ ಎಂಬ ಗೊಂದಲ ಇತ್ತು. ಯಾಕೆಂದರೆ ನನಗೆ ಯಾವುದೇ ನಟನೆಯ ಹಿನ್ನೆಲೆ ಇರಲಿಲ್ಲ. ನಟನೆಯ ತರಬೇತಿಯನ್ನೂ ಪಡೆದವಳಲ್ಲ. ಹಾಗಿರುವಾಗ ನಾನು ನಟಿಸಬಲ್ಲೆನೆ ಎಂಬ ಅನುಮಾನವಿತ್ತು. ಆದರೆ ಯಾವುದೋ ಹೊಸ ಅನುಭವ ಪಡೆದುಕೊಳ್ಳಲು ಅವಕಾಶ ಸಿಗುತ್ತಿದೆ. ಯಾಕೆ ಬಿಟ್ಟುಕೊಡಬೇಕು ಎಂದು ಒಪ್ಪಿಕೊಂಡೆ' ಎಂದು ಕ್ಯಾಮೆರಾ ಕಡೆಗೆ ಹೊರಳಿಕೊಂಡ ಸನ್ನಿವೇಶವನ್ನು ನೆನಪಿಸಿಕೊಳ್ಳುವ ವೈಷ್ಣವಿಯನ್ನು ಮನೆಮನೆಯಲ್ಲಿ ಚಿರಪರಿಚಿತೆಯನ್ನಾಗಿಸಿದ್ದು 'ಅಗ್ನಿಸಾಕ್ಷಿ' ಧಾರಾವಾಹಿಯ 'ಸನ್ನಿಧಿ' ಪಾತ್ರ. ಅದರ ಕುರಿತೂ ಅವರು ಉತ್ಸಾಹದಿಂದ ಮಾತಾಡುತ್ತಾರೆ.

'ಅಗ್ನಿಸಾಕ್ಷಿ' ಧಾರಾವಾಹಿ ಯಾರಿಗೋ ಒಬ್ಬರಿಗೆ ಅಂತಲ್ಲ, ಅದರಲ್ಲಿ ಕೆಲಸ ಮಾಡಿದ ಎಲ್ಲರಿಗೂ ಒಳ್ಳೆಯದನ್ನೇ ಮಾಡಿದೆ. ಬರೀ ನಟರಲ್ಲ, ನಿರ್ದೇಶಕರು, ತಂತ್ರಜ್ಞರು, ನಿರ್ಮಾಪಕರು ಅಷ್ಟೇ ಏಕೆ, ಅದನ್ನು ಪ್ರಸಾರ ಮಾಡುತ್ತಿದ್ದ ಚಾನಲ್‌ನವರಿಗೂ ಒಳ್ಳೆಯದನ್ನೇ ಮಾಡಿದೆ. ನನ್ನ ಬದುಕಿನಲ್ಲಿಯೂ ಅದು ಹಲವು ಒಳ್ಳೆಯ ನೆನಪುಗಳನ್ನು ಆ ಧಾರಾವಾಹಿ ಕೊಟ್ಟಿದೆ' ಎಂದು ಅವರು ನೆನಪಿಸಿಕೊಳ್ಳುತ್ತಾರೆ.

'ಅಗ್ನಿಸಾಕ್ಷಿ' ಮುಗಿಯುತ್ತಿದ್ದ ಹಾಗೆಯೇ ವೈಷ್ಣವಿ ಬಿಗ್‌ಬಾಸ್ ಮನೆಗೆ ಸೇರಿಕೊಂಡರು. ಮಿತಭಾಷಿ, ನಿಜಬದುಕಿನಲ್ಲಿ ನಟಿಸಿ ಗೊತ್ತಿಲ್ಲದ ಈ ಮುಗ್ಧ ಹುಡುಗಿ ಆ ಮನೆಯಲ್ಲಿ ಜಾಸ್ತಿ ದಿನ ಇರಲಾರಳು ಎಂದೇ ಬಹುತೇಕರು ಅಂದುಕೊಂಡಿದ್ದರು. ಜನರ ಮಾತು ಬಿಡಿ, ಸ್ವತಃ ವೈಷ್ಣವಿಗೇ ತಾನು ಬಿಗ್‌ಬಾಸ್ ಮನೆಗೆ ಹೊಂದಿಕೊಳ್ಳಬಲ್ಲೆನಾ ಎಂಬ ಅನುಮಾನ ಇತ್ತು.

'ಸೀರಿಯಲ್ ಅವಕಾಶ ಬಂದಾಗಲೂ ನನಗೆ ಇಂಥ ಅನುಮಾನ ಕಾಡಿತ್ತು. ಆಗ ಏನಾದರಾಗಲಿ ಎಂದು ಒಪ್ಪಿಕೊಂಡಿದ್ದೆ. ಈಗಲೂ ಅಷ್ಟೇ ಹೊಸ ಅನುಭವ ಸಿಗುತ್ತದೆ ಎಂದಾದಾಗ ಯಾಕೆ ನಿರಾಕರಿಸುವುದು ಎಂದು ಒಪ್ಪಿಕೊಂಡೆ. ನನ್ನ ಆ ನಿರ್ಧಾರದ ಬಗ್ಗೆ ಈಗಲೂ ನನಗೆ ಕಿಂಚಿತ್ ಪಶ್ಚಾತ್ತಾಪ ಇಲ್ಲ. ಬಿಗ್‌ಬಾಸ್ ನನಗೆ ತುಂಬ ಒಳ್ಳೆಯ ಅನುಭವ ಕೊಟ್ಟಿದೆ. ಸಾಕಷ್ಟು ನೆನಪುಗಳನ್ನು ಕೊಟ್ಟಿದೆ' ಎನ್ನುತ್ತಾರೆ ಅವರು.

ಈಗ ವೈಷ್ಣವಿ ಅವರ ವೃತ್ತಿಬದುಕು ಕವಲು ದಾರಿಯಲ್ಲಿ ಬಂದು ನಿಂತಿದೆ. ಒಂದು ದಾರಿಯಲ್ಲಿ ಚಿತ್ರರಂಗದ ಕಡೆಯ ಸೂಚನಾಫಲಕ ಇದ್ದರೆ, ಇನ್ನೊಂದು ದಾರಿಯಲ್ಲಿ ಕಿರುತೆರೆಗೆ ಹೊರಳುವ ಅವಕಾಶವಿದೆ. ಈಗ ನಿಮ್ಮ ನಿರ್ಧಾರ ಏನು ಎಂದು ಕೇಳಿದರೆ, 'ಯಾವುದೇ ಒಂದನ್ನು ಮಾತ್ರ ಯಾಕೆ ಆಯ್ಕೆ ಮಾಡಿಕೊಳ್ಳಬೇಕು?' ಎಂದು ಮರುಪ್ರಶ್ನೆ ಹಾಕಿ ನಗುತ್ತಾರೆ ಅವರು.

'ಕಿರುತೆರೆಯಲ್ಲಿ ನಟಿಸುವವರನ್ನು ಟೀವಿ ನಟಿ ಎಂದು ಟ್ಯಾಗ್ ಮಾಡುತ್ತಾರೆ. ಚಿತ್ರರಂಗದವರನ್ನು ಸಿನಿಮಾದವರು ಎಂದು ಟ್ಯಾಗ್ ಮಾಡುತ್ತಾರೆ. ನಾನು ನಟಿ ಅಷ್ಟೆ. ನನಗೆ ಈ ಟ್ಯಾಗ್‌ಗಳನ್ನು ಬ್ರೇಕ್ ಮಾಡಬೇಕು ಎಂದು ಅನಿಸುತ್ತದೆ.